**ಸಿ.ಸಿ.ನಂ.:**426/2025

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **26–02–2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಕುಮಾರಿ. ಪಿ ಎಚ್ ಕೆ ವಕೀಲರಿಂದ**

ನಾನು 2019 ನೇ ಸಾಲಿನಿಂದ ಫಿರಯಾದಿ ಸಂಸ್ಥೆಯಲ್ಲಿ ಶಾಖಾ ವ್ಯವಸ್ಥಾ ಪಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. 2019 ರ ಪೂರ್ವದಲ್ಲಿ ಆದ ವ್ಯವಹಾರದ ಕುರಿತಾಗಿ ನನಗೆ ವಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ನಾನು ಕೇಳಿ ತಿಳಿದುಕೊಂಡಿರುತ್ತೇನೆ ಎಂದು ಹೇಳುತ್ತಾರೆ. ಈ ಪ್ರಕರಣದ ಸಾಲದ ವ್ಯವಹಾರ ಆಗಿದೆ ಎಂಬ ಸಂದರ್ಭದಲ್ಲಿ ನಾನು ಫಿರ್ಯಾದಿ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ.

2. ನಾವು ಸಾಲಕ್ಕಾಗಿ ಬಂದಂತಹ ಸಂದರ್ಭದಲ್ಲಿ ಮೊದಲು ಸಾಲದ ದಾಖಲಾತಿಗೆ ಸಹಿಯನ್ನು ಪಡೆದುಕೊಂಡು ನಂತರದಲ್ಲಿ ಸಾಲ ಮಂಜೂರಾದ ನಂತರ ಉಳಿದ ದಾಖಲಾತಿಗಳಿಗೆ ಸಹಿಯನ್ನು ಪಡೆದುಕೊಳ್ಳುತ್ತೇವೆ. ಸಾಲಕ್ಕಾಗಿ ಅರ್ಜಿ ಬಂದಂತಹ ಸಂದರ್ಭದಲ್ಲಿ ನಾವು ಸದ್ರಿ ಸಾಲದ ಅರ್ಜಿಯನ್ನು ನಾವು ನಮ್ಮ ಪ್ರಧಾನ ಕಛೇರಿಗೆ ಕಳುಹಿಸುತ್ತೇವೆ. ಈ ಪ್ರಕರಣದ ಸಾಲಕ್ಕೆ ಸಂಭಂಧಿಸಿದಂತೆ ಯಾವ ದಿನಾಂಕದಂದು ಆಡಳಿತ ಮಂಡಳಿಯ ಸಭೆ ನಡೆದಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

3. ಈ ಪ್ರಕರಣದ ಸಾಲಗಾರರು ದಿನಾಂಕಃ 06/07/2018 ರಂದು ಸಾಲ ಮಂಜೂರಾಗಿದ್ದು ಅದರ ಎರಡು ದಿನಗಳ ಪೂರ್ವದಲ್ಲಿ ಸಾಲಕ್ಕಾಗಿ ಅರ್ಜಿಯನ್ನು ನೀಡಿರಬಹುದು. ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲಾತಿಗಳನ್ನು ಸಾಲವು ದಿನಾಂಕಃ 06/07/2018 ರಂದು ಮಂಜೂರಾದ ಕುರಿತಾಗಿ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ4 ಹಾಗೂ ನಮ್ಮ

ಫಿರ್ಯಾದಿಯಲ್ಲಿ ದಿನಾಂಕಃ 06/07/2018 ಎಂದು ನಮೂದು ಇಲ್ಲ ಎಂದರೆ ಸಾಕ್ಷಿಯು ಈ ಪ್ರಕರಣದ ಸಾಲವನ್ನು ಜುಲೈ 2018 ರಲ್ಲಿ ನೀಡಲಾಗಿದೆ ಎಂದು ನುಡಿಯುತ್ತಾರೆ.

4. ಈ ಪ್ರಕರಣದ ಸಾಲವನ್ನು ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಈ ಸಾಲದ ಪೂರ್ವದಲ್ಲಿ ಸಾಲವನ್ನು ಪಡೆದುಕೊಂಡಿದ್ದು, ಸದ್ರಿ ಸಾಲವನ್ನು ಈ ಸಾಲದ ಮುಖಾಂತರ ನವೀಕರಣಗೊಳಿಸಿರುತ್ತಾರೆ. ಸಾಮಾನ್ಯವಾಗಿ ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಸಾಲ ಕಟ್ ಬಾಕಿಯಾದ ವ್ಯಕ್ತಿಗಳಿಗೆ ಸಾಲವನ್ನು ನೀಡುವುದಿಲ್ಲ.

5. ನಿಪಿ7 ರೊಂದಿಗೆ ದಾಖಲಾತಿಯಾದ Remakrs of the Manager ಎಂಬಲ್ಲಿ ಯಾವುದೇ ಸಹಿ ಇಲ್ಲ ಎಂದರೆ ಸರಿ. ನಾವು ನ್ಯಾಯಾಲಯಕೆ ಹಾಜರುಪಡಿಸಿದ ನಿಪಿ7 ರಿಂದ 11 ರಲ್ಲಿ ದಿನಾಕ 12/07/2018 ಎಂದು ನಮೂದು ಇದೆ ಎಂದರೆ ಸರಿ. ನಾವು ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸುವ ಪೂರ್ವದಲ್ಲಿ ಯಾವುದೇ ಸಾಲವನ್ನು ಮಂಜೂರು ಮಾಡುವುದಿಲ್ಲ.

6. ಈ ಪ್ರಕರಣದ ಸಾಲವನ್ನು ಮಂಜೂರು ಆಗುವ ಸಂದರ್ಭದಲ್ಲಿ ಸದ್ರಿ ದಿನದಂದು ಎಷ್ಟು ಸಾಲ ಮಂಜೂರಾಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆಡಳಿತ ಮಂಡಳಿಯ ಸಭೆಯ ದಿನಾಂಕದಂದು ಯಾವ ಯಾವ ಸಾಲಗಳು ಮಂಜೂರಾಗಿದೆ ಎಂಬ ಬಗ್ಗೆ ನಮೂದು ಮಾಡಿ ಸದ್ರಿ ಠರಾವಿನ ಪ್ರತಿಯನ್ನು ನಮಗೆ ಕಳುಹಿಸುತ್ತಾರೆ ಎಂದರೆ ಸರಿ. ರಾೀ ಪ್ರಕರಣದ ಸಾಲವು ಮಂಜೂರಾಗಿದೆ ಹಾಗೂ ಎಷ್ಟು ಸಾಲದ ಮೊತ್ತದ ಸಾಲವು ಮಂಜೂರಾಗಿದೆ ಎನ್ನುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಸದ್ರಿ ದಾಖಲಾತಿಯು ನಮ್ಮ ಪ್ರಧಾನ ಕಛೇರಿಯಲ್ಲಿ ಇದೆ.

7. ಈ ಪ್ರಕರಣದ ಸಾಲದ ಭದ್ರತೆಗಾಗಿ 30 ಸಾವಿರ ಮುದ್ದತ ಠೇವಣೆ ಹಾಗೂ ಪ್ರತಿಶತ 5 ರಷ್ಟು ಷೇರನ್ನು ಪಡೆದುಕೊಂಡಿರುತ್ತೇವೆ. ಈ ಭದ್ರತೆಗಳನ್ನು ಸಾಲ ಮಂಜೂರಾಗುವ ದಿನದಂದು ಪಡೆದುಕೊಳ್ಳುತ್ತೇವೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ